'ತೇರು', 'ಗಾಂಧಿಬಂದ' ಕಾದಂಬರಿಗಳನ್ನು; ವೈದೇಹಿ, ನುಗಡೋಣಿ, ರಶೀದ್, ಮೊಗಳ್ಳಿ ಕತೆಗಳನ್ನು; ಬೇಂದ್ರೆಕಾವ್ಯ–ಶ್ರೀರಂಗರ ನಾಟಕಗಳನ್ನು ನೆನೆಯಬಹುದು. ಕುವೆಂಪು ಕಾದಂಬರಿಗಳಲ್ಲಿ ದಲಿತರ ಕನ್ನಡ ಇರುವಂತೆಯೇ ಮಲೆಯಾಳದ ಕಣ್ಣಾಪಂಡಿತನ ಕನ್ನಡವೂ ಇದೆ. ಸಾಹಿತ್ಯ ಕೃತಿಗಳು ಭಾಷಿಕ ಚಹರೆಗಳನ್ನು ಕೇವಲ ಉಪಕರಣದಂತೆ ಬಳಸುವುದಿಲ್ಲ. ಬೇರೆಬೇರೆ ಪ್ರಾಂತ್ಯದ ಅಥವಾ ಸಮುದಾಯಗಳ ಜೀವನಕ್ರಮಗಳನ್ನು, ಅವುಗಳ ಅನನ್ಯತೆಗಳ ಮೂಲಕ ಕಾಣಿಸುವ ಉದ್ದೇಶದಲ್ಲಿ ಮರುಹುಟ್ಟಿಸುತ್ತವೆ. 'ಕುಸುಮಬಾಲೆ' ಕನ್ನಡವು ನಂಜನಗೂಡಿನ ಕನ್ನಡವನ್ನು ಹೀಗೆ ಮರುಹುಟ್ಟಿಸಿತು. ಅದು ಮುನ್ನಡೆದು, ಪ್ರಾದೇಶಿಕ ಭಾಷೆಯನ್ನು ಕೇವಲ ಉದ್ಧರಣ ಚಿಹ್ನೆಗಳಲ್ಲಿರುವ ಪಾತ್ರಗಳ ಮಾತಿಗೆ ಸೀಮಿತಗೊಳಿಸದೆ ನಿರೂಪಣೆಯ ಭಾಷೆಗೂ ವಿಸ್ತರಿಸುತ್ತದೆ. ಆ ಮೂಲಕ ಓದುಗರು ಸ್ಥಳೀಯ ಕನ್ನಡದ ಚಹರೆಗೆ ಒಗ್ಗಿಕೊಳ್ಳಲು ಒತ್ತಾಯಿಸುತ್ತದೆ. ಪ್ರಾದೇಶಿಕ ಅಥವಾ ಸಮುದಾಯ ವಿಶಿಷ್ಟ ಭಾಷೆಯನ್ನು ರೋಚಕತೆಗಾಗಿ ಬಳಸಿದ ಯಾವ ಯತ್ನಗಳೂ ಬಹುತ್ವವನ್ನು ಸಾರ್ಥಕವಾಗಿ ಹಿಡಿಯಲು ಸಾಧ್ಯವಾಗಿಲ್ಲ ಮತ್ತು ಮಹತ್ವದ ಕಲಾಕೃತಿಗಳಾಗಿಲ್ಲ.

ಇಲ್ಲಿಯೇ ಬೇರೆಬೇರೆ ವೃತ್ತಿಯವರು ಸರಕು ಸೇವೆಯ ಉತ್ಪಾದನೆಯಲ್ಲಿ ಸೃಷ್ಟಿಮಾಡಿಕೊಂಡಿರುವ ವೃತ್ತಿಗನ್ನಡದ ಚಹರೆಗಳ ರೂಪಾಂತರವನ್ನೂ ಗಮನಿಸಬಹುದು. ವೃತ್ತಿಗನ್ನಡವನ್ನು ಸಾಹಿತ್ಯರಚನೆ ಮತ್ತು ತಾತ್ವಿಕ ಚರ್ಚೆಯಲ್ಲಿ ದುಡಿಸಿಕೊಂಡು, ಅವಕ್ಕೆ ಘನತೆ ಗಹನತೆಗಳನ್ನು ಮೊದಲಿಗೆ ಕಲ್ಪಿಸಿದವರು ಶರಣರು. ವ್ಯಾಪಾರಿಗಳು, ಪಶುಗಾಹಿಗಳು, ರೈತರು, ಚಮ್ಮಾರರು, ನೇಕಾರರು, ಸೂಳೆಯರು, ಕಮ್ಮಾರರು ತಮ್ಮ ವೃತ್ತಿ ಪರಿಭಾಷೆಯಲ್ಲಿ ದಾರ್ಶನಿಕ ಚರ್ಚೆ ಮಾಡಿದರು. ಮಾದಾರ ಧೂಳಯ್ಯನ ವಚನವೊಂದರಲ್ಲಿ ಶಿವನು ಚರ್ಮದ ಅಟ್ಟೆಗೆ ಚುಚ್ಚುವ ಉಳಿಯ ಮೊನೆಯಲ್ಲಿ ಪ್ರತ್ಯಕ್ಷವಾಗುತ್ತಾನೆ. ಬಿಡಿಬಿಡಿಯಾದ ಚರ್ಮ ನೂಲುಗಳನ್ನು ಉಳಿಯ ನೆರವಿನಿಂದ ಕಸುಬುದಾರನ ಕಲ್ಪನೆಗೆ ಅನುಸಾರವಾಗಿ ಸೇರಿಸಿ ಚಪ್ಪಲಿ ತಯಾರಿಸುವ ಕ್ರಿಯೆಯು, ಅನುಭವ ಕಲ್ಪನೆ ಚಿಂತನೆಗಳನ್ನು ಭಾಷೆಯ ಮಾಧ್ಯಮದಲ್ಲಿ ಏಕೀಭವಿಸಿ ಕೃತಿಹುಟ್ಟುವುದನ್ನೂ ಅಭಿನಯಿಸುವಂತಿದೆ. ದೇಹ, ದುಡಿಮೆ, ಮನಸ್ಸು, ಧ್ಯಾನ, ಸಾಧನೆಗಳು ಅನುಭಾವದಲ್ಲಿ ಕೂಡುವುದನ್ನೂ ಕಾಣಿಸುವಂತಿದೆ. ವೃತ್ತಿಭಾಷೆಯನ್ನು ದಾರ್ಶನಿಕ ಅಭಿವ್ಯಕ್ತಿಗೆ ದುಡಿಸುವುದನ್ನು ಕಸುಬುದಾರ ತತ್ವಪದಕಾರರೂ ಮುಂದುವರೆಸಿದರು. ಇದು ವೃತ್ತಿ ಪರಿಭಾಷೆಯ ದಾರ್ಶನಿಕ ರೂಪಾಂತರ ಮಾತ್ರವಲ್ಲ. ಕಸುಬು ಹಾಗೂ ದುಡಿಮೆಗಳಿಗೆ, ಅವನ್ನು ಮಾಡುವ ಸಮುದಾಯಗಳಿಗೆ ಘನತೆ ಒದಗಿಸುವ ಯತ್ನ ಕೂಡ. ಆಧುನಿಕ ಸಾಹಿತ್ಯದಲ್ಲಿ, ಸಮುದಾಯ ಮತ್ತು ವೃತ್ತಿ ವಿಶಿಷ್ಟ ಕನ್ನಡದ ಚಹರೆಗಳು ಶತರೂಪದಲ್ಲಿ ಪ್ರಕಟವಾಗಿವೆ. ಅಧಿಕಾರಿಗಳು, ಪೊಲೀಸರು, ವಿಜ್ಞಾನಿಗಳು, ವೈದ್ಯರು, ಚರ್ಮಗಾರರು, ರೈತರು, ಗೃಹಿಣಿಯರು, ಸಂಗೀತಗಾರರು, ನಟನಟಿಯರು, ಪತ್ರಕರ್ತರು, ವಾಸ್ತುಶಿಲ್ಪಿಗಳು, ರಾಜಕಾರಣಿಗಳು, ತಂತಮ್ಮ ಕ್ಷೇತ್ರದ ಕನ್ನಡವನ್ನು ಬರಹದಲ್ಲಿ ಮಾತಿನಲ್ಲಿ ದುಡಿಸಿದರು. ಅನುಭವ ನಿರೂಪಿಸುವ ನೆಪದಲ್ಲಿ ಜ್ಞಾನಸೃಷ್ಟಿಸುವ ಮತ್ತು ಲೋಕದೃಷ್ಟಿ ಮಂಡಿಸುವ ಕಾರ್ಯ ಮಾಡಿದರು.

## ಬಹುಭಾಷಿಕ ಸಂವೇದನೆ

ಕರ್ನಾಟಕದಲ್ಲಿ ಕನ್ನಡವು ಪ್ರಧಾನ ಸ್ಥಾನದಲ್ಲಿದ್ದರೂ ಏಕಾಂಗಿಯಾಗಿಲ್ಲ. ಉರ್ದು, ಮರಾಠಿ, ತಮಿಳು, ತೆಲುಗು, ಮಲೆಯಾಳ, ಕೊಡವ, ಕೊರಗ, ಲಂಬಾಣಿ, ತುಳು, ಇಂಗ್ಲಿಷು, ಹಿಂದಿ, ಮಾರವಾಡಿ, ಬ್ಯಾರಿ, ಮಲಾಮೆ, ಕೊಂಕಣಿಯೇ ಮೊದಲಾದ ಭಾಷೆಗಳ ಸಂಗದಲ್ಲಿ ಬದುಕುತ್ತಿದೆ. ಕರ್ನಾಟಕದ ಬಹುತೇಕ ನಾಗರಿಕರು, ಲೇಖಕರು, ಹಾಡುಗಾರರು ಹಾಗೂ ನಟರು ಬಹುಭಾಷಿಕರು. ಹೀಗಾಗಿ ಬಹುಭಾಷಿಕ ಸಮುದಾಯ ಹಾಗೂ ಸಾಹಿತ್ಯ ಕೃತಿಗಳು ಸಹಜವಾಗಿಯೇ ಸೃಷ್ಟಿಯಾಗಿವೆ. ಇವುಗಳ ಜೊತೆಗೆ ಏಕಕಾಲಕ್ಕೆ ಹಲವು ಭಾಷೆಗಳಲ್ಲಿ ನುಡಿವ–ಬರೆವ ಧಾರ್ಮಿಕ–ಆಧ್ಯಾತ್ಮಿಕ ಪಂಥಗಳೂ ಇವೆ. ಇಂಚಗೇರಿಯ ಪಂಥದಲ್ಲಿ ಮರಾಠಿ ಮತ್ತು ಕನ್ನಡದಲ್ಲಿ, ಗುಡೇಕಲ್ಲಿನ ಅಲ್ಲೀಸಾಬು ಪರಂಪರೆಯಲ್ಲಿ ತೆಲುಗು, ಕನ್ನಡ, ಉರ್ದುಗಳಲ್ಲಿ ಸತ್ಸಂಗ ಜರುಗುತ್ತದೆ. ಕರಾವಳಿಯಲ್ಲಿ ಕನ್ನಡ, ಮಲೆಯಾಳ